



ಮಿಸ್ಸೌಲ ಎನ್ನುವ ಹಿಮ ಸರೋವರದ ಪ್ರವಾಹದಿಂದ ಸುಮಾರು 13 ಸಾವಿರ ವರ್ಷಗಳಿಗೂ ಹಿಂದೆ ಈ ಜಲಪಾತ ನಿರ್ಮಾಣವಾಗಿದೆಯಂತೆ.

■ ಚಿತ್ರ– ಲೇಖನ:

**ಜಿ. ನಾರಾಯಣ**

ಅಮೆರಿಕದ ವಾಷಿಂಗ್ಟನ್ ರಾಜ್ಯ ವೈವಿಧ್ಯಮಯ. ಇದರ ಪಶ್ಚಿಮ ಭಾಗ ಬೆಟ್ಟ ಗುಡ್ಡಗಳು, ನದಿ ಸರೋವರಗಳು, ಸಮೃದ್ಧ ಕಾಡಿನಿಂದ ಕೂಡಿದ್ದರೆ, ಪೂರ್ವಭಾಗ ಪೂರ್ಣ ಒಣ ಭೂಮಿ. ಮರಳುಗಾಡಿನಂತಹ ಪ್ರದೇಶವೂ ಇದೆ. ಅಲ್ಲೊಂದು ಜಲಪಾತವಿದೆ. ಅದುವೇ ಪಲೌಸ್.

ಪಶ್ಚಿಮ ವಾಷಿಂಗ್ಟನ್‌ನ ಸಿಯಾಟಲ್‌ನಿಂದ ಸುಮಾರು 400 ಕಿ.ಮೀ ದೂರದಲ್ಲಿದೆ. ಒಂದು ಬೆಳಿಗ್ಗೆ ಇಲ್ಲಿಗೆ ಹೊರಟೆವು. ಆರಂಭದಲ್ಲಿ ಪಶ್ಚಿಮ ಭಾಗದ ಗಡಿಯಂತಿರುವ ಸ್ನೋ ಕಲಮೀ ಪಾಸ್‌ನ ಹಚ್ಚ ಹಸುರಿನ ಪರ್ವತ ಪ್ರದೇಶ ದಾಟುತ್ತಿದ್ದಂತೆ, ನಾವು ಬಂದ ಭೂಭಾಗಕ್ಕೆ ಸಂಬಂಧವೇ ಇಲ್ಲ ಎನ್ನುವಂಥ ಬಯಲು ಪ್ರದೇಶ! ಮೊದಲಿಗೆ ಸ್ವಲ್ಪ ಹಸಿರು ಹುಲ್ಲುಗಾವಲು, ಹೊಲಮನೆಗಳು ಕಾಣಿಸಿದರೂ ಮುಂದೆ ಸಾಗಿದಂತೆ ಬರಿಯ ಒಣ ಬಯಲು .

ಆದರೆ ಇಂತಹ ಒಣ ಪ್ರದೇಶದಲ್ಲಿಯೇ ಕೊಲಂಬಿಯಾ ನದಿ ಹರಿಯುತ್ತಿದೆ. ಈ ಅಗಾಧ ಒಣ ಪ್ರದೇಶ ವ್ಯವಸಾಯಕ್ಕೆ ಬಳಕೆಯಾಗುತ್ತಿದೆ. ಕುರುಚಲು ಗಿಡಗಳು ಮಾತ್ರ ಬೆಳೆಯಬಲ್ಲಂಥ ಈ ಬಯಲು ದಿಣ್ಣೆ ಪ್ರದೇಶದಲ್ಲಿ ಗೋಧಿ, ಬಾರ್ಲಿ, ಆಲೂಗಡ್ಡೆ, ಈರುಳ್ಳಿ, ಕಾಳು ಬೆಳೆಯುತ್ತಾರೆ. ಕಣ್ಣು ಹಾಯಿಸಿದಷ್ಟು ದೂರ ಇಂಥದೇ ಹೊಲಗಳು. ಗೋಧಿ ಬೆಳೆ ಕೆಲವೆಡೆ ಕಟಾವಿಗೆ ಸಜ್ಜಾಗಿದ್ದರೆ, ಕೆಲವೆಡೆ ಸಾವಿರಾರು ಎಕರೆಗಳಲ್ಲಿ ಬಂಗಾರದ ಬಣ್ಣ ಚೆಲ್ಲಿದಂತೆನಿಸುವ ಗೋಧಿ ಹೊಲಗಳ ದೃಶ್ಯ. ಜಗತ್ತಿನಲ್ಲಿಯೇ ಪ್ರತಿ ಎಕರೆಗೆ ಅತಿ ಹೆಚ್ಚು ಗೋಧಿ ಬೆಳೆಯುವ ಪ್ರದೇಶವಿದು. ವಿಮಾನದ ಕಿಟಕಿ ಮೂಲಕ ಇಣುಕಿದರೆ ಅನಂತವಾಗಿ ಹಬ್ಬಿದ ಗೋಧಿ ಹೊಲಗಳ ನೋಟ ಮನಮೋಹಕ.

ಇಲ್ಲಿಂದ ಮುಂದಕ್ಕೆ ಸಾಗಿದರೆ ಅಲ್ಲೆನ್ಸ್ ಬರ್ಗ್ ಎನ್ನುವ ಸುಂದರವಾದ ಪುಟ್ಟ ಊರು ಇದೆ. ಇಲ್ಲಿ ಫ್ರೆಡ್ ಮೇಯರ್‌ನಂತಹ ಮಾಲ್‌ಗಳಿಂದ ಹಿಡಿದು ಸಕಲ ಸೌಕರ್ಯಗಳಿವೆ. ಗಾಡಿಗೆ ಪೆಟ್ರೋಲ್, ತಿನ್ನುವ ಮತ್ತು ಕುಡಿಯುವ ಪದಾರ್ಥಗಳ ವ್ಯವಸ್ಥೆಯನ್ನು ಇಲ್ಲಿಯೇ ಮಾಡಿಕೊಳ್ಳುವುದು ಉತ್ತಮ. ಇಲ್ಲಿಂದ ಮುಂದಕ್ಕೆ ಬರಿಯ ಬೆಂಗಾಡು. ಮುಖ್ಯ ರಸ್ತೆಯಿಂದ ತಿರುಗಿ ಪಲೌಸ್ ಜಲಪಾತಕ್ಕೆ ತಲುಪುವ ಸುಮಾರು 2 ಕಿ.ಮೀ ಉದ್ದ ದಾರಿ ದುರ್ಗಮವಾಗಿದೆ. ಎಚ್ಚರಿಕೆ ವಹಿಸುವುದು ಅಗತ್ಯ. ಸುತ್ತ ಕಲ್ಲು ಹಾಸು, ಸ್ವಲ್ಪ ಕುರುಚಲು ಗುಡ್ಡ ಪ್ರದೇಶ. 10 ಡಾಲರ್ ಪಾರ್ಕಿಂಗ್ ಚಾರ್ಜ್ ನೀಡಿ ಕಾರು ನಿಲ್ಲಿಸಿ ನಾಲ್ಕು ಮಾರು ಸಾಗಿದರೆ ಕಣ್ಣೆದುರಿಗೇ ಪಲೌಸ್ ಜಲಪಾತ!

## ಪುರಾತನ ಜಲಪಾತ

ಮಿಸ್ಸೌಲ ಎನ್ನುವ ಹಿಮ ಸರೋವರದ ಪ್ರವಾಹದಿಂದ ಸುಮಾರು 13 ಸಾವಿರ ವರ್ಷಗಳಿಗೂ ಹಿಂದೆ ಈ ಜಲಪಾತ ನಿರ್ಮಾಣವಾಗಿದೆ. ಮಹಾ ಹಿಮ ಪ್ರವಾಹ ಹರಿದು ಹೋದ ಹಾದಿಯಲ್ಲಿ ಉಳಿಸಿದ ಒಂದು ಜೀವಂತ ಕುರುಹು ಇದೆನ್ನಬಹುದು. ಅಮೆರಿಕಾದ ಮೂಲ ನಿವಾಸಿಗಳಾದ ಪಲುಸ್ ಇಂಡಿಯನ್ನರು ಈ ಸರೋವರದ ಸುತ್ತಮುತ್ತ ವಾಸಿಸುತ್ತಿದ್ದರು. ಇವರ ಪ್ರಾಚೀನ ಹಳ್ಳಿ ಹಾಗೂ  ಮೀನುಗಾರಿಕೆ ನಡೆಸುತ್ತಿದ್ದ ಸ್ಥಳ ಪಲೌಸ್ ಜಲಪಾತದಿಂದ ನಾಲ್ಕು ಮೈಲಿ ದೂರದಲ್ಲಿ ಪಲೌಸ್ ನದಿ ಹಾಗೂ ಸ್ನೇಕ್ ನದಿಗಳು ಸಂಗಮಿಸುವ ಸ್ಥಳದಲ್ಲಿತ್ತು.

1841 ರಲ್ಲಿ ಕ್ಯಾಪ್ಟನ್ ಚಾರ್ಲ್ಸ್ ವಿಲ್ಕಿಸ್ ಎನ್ನುವವನು ಈ ಪ್ರದೇಶದ ಸರ್ವೇ ನಡೆಸಿದ ಸಂದರ್ಭದಲ್ಲಿ ಈ ಜಲಪಾತವನ್ನು ದಾಖಲಿಸಿದ. 1858ರಲ್ಲಿ ಅಮೆರಿಕಾದ ಸರ್ಕಾರ ಕರ್ನಲ್ ಸ್ಟೆಪ್ ಟೋ ಎನ್ನುವ ಸೈನ್ಯಾಧಿಕಾರಿಯ ನೇತೃತ್ವದಲ್ಲಿ ಈ ಪ್ರದೇಶವನ್ನು ವಶಪಡಿಸಿಕೊಳ್ಳಲು ತನ್ನ ಸೈನ್ಯವನ್ನು